2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತ ಪ್ರದನ್ಯಾ., ದಂಡಾಧಿಕಾರಿಗಳವರ
ನ್ಯಾಯಾಲಯ, ಕೃಷ್ಣರಾಜಪೇಟೆ

**ಸಿ.ಸಿ. ನಂ. 1320/2020**

| | | |
|---|---|---|
| ಸಾಕ್ಷಿದಾರರ ಹೆಸರು | ಕುಮಾರ | ಪ್ರಾಸ – 2 ಚಾ.ಸಾ - 4 |
| ತಂದೆಯ/ಗಂಡನ ಹೆಸರು | ನರಸಿಂಹಯ್ಯ | |
| ವಯಸ್ಸು | 34 ವರ್ಷ | |
| ವೃತ್ತಿ | ವ್ಯವಸಾಯ | |
| ವಾಸ ಸ್ಥಳ | ಕೆ.ಆರ್.ಪೇಟೆ | |

ಸಾಕ್ಷಿಗೆ ದಿನಾಂಕಃ **04.07.2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎ. ಪಿ. ಪಿ. ಯವರಿಂದ,

ಈಗ ಸಾಕ್ಷಿಗೆ ಸ್ಥಳಮಹಜರ್ ತೋರಿಸಲಾಗಿ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಇದರಲ್ಲಿ ಬರೆದಿರುವ ವಿಚಾರ ತಿಳಿದಿರುವುದಿಲ್ಲ ಎಂದು ಮತ್ತು ಐದು ವರ್ಷದ ಹಿಂದೆ ಕೆ.ಆರ್.ಪೇಟೆ ಟೌನ್ ಪೊಲಿಸ್ ಠಾಣೆ ಹತ್ತಿರ ಸಹಿ ಮಾಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆರೋಪಿಯನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುನ್ನು ಮಾಡಲು ಅನುಮತಿಯನ್ನು ಕೋರುತ್ತಿದ್ದು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿಯು ಸಾಕ್ಷಿಯನ್ನು ನುಡಿದಿದ್ದರಿಂದ ಹಾಗೂ ಪ್ರಕರಣದ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಪಾಟೀ ಸವಾಲುನ್ನು ಮಾಡಲು ಅನುಮತಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ. ಯವರಿಂದ,

ದಿನಾಂಕ, 26.09.2019 ರಂದು ಬೆಳಿಗ್ಗೆ 8-30 ರಿಂದ 9-30 ರ ಸಮಯದಲ್ಲಿ ಚಾಸಾ.1 ರವರು ನನ್ನ ಮತ್ತು ಚಾಸಾ.3 ರವರನ್ನು ಸ್ಥಳಪಂಚನಾಮೆಯಾಗಿ ಕರೆದುಕೊಂಡು

ಹೋಗಿರುತ್ತಾರೆರಂದರೆ ಸರಿಯಲ್ಲ . ಆ ಸಮಯದಲ್ಲಿ 90 ಎಂಎಲ್ ನ 44 ಮದ್ಯ ತುಂಬಿದ ರಾಜಾ ವಿಸ್ಕಿ ಪ್ಯಾಕೇಟ್ ಎರಡು 90 ಎಂಎಲ್ ನ 19 ಮದ್ಯ ತುಂಬಿದ ಹೈಟವರ್ ಒಂದು, ಮೂರು 90 ಎಂಎಲ್ ನ 14 ಹೈ ಒಲ್ಡ್ ಬಿಯರನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ಅರೋಪಿತರಿಗೆಕ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎದರೆ ಸರಿಯಲ್ಲ.

ಆರೋಪಿಯ ಬಗ್ಗೆ ಗೊತ್ತಿದ್ದರೂ ಸಹ ಅರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ, ಇಲ್ಲ

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಸ ಒ .**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ .**